ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಸಚಿವರು).—

ಅ) ಪ್ರತಿ ಹಳ್ಳಿಯಲ್ಲಿ ರಾಸುಗಳು ಮೇಯಲು ಪ್ರತಿ ನೂರು ರಾಸುಗಳಿಗೆ ಹನ್ನೆರಡು ಹೆಕ್ಟೇರ್ ನಂತೆ (೩೦ ಎಕರೆ) ಮೀಸಲಿಡಬೇಕಾಗಿದೆ.

ಆ) ಇಲ್ಲ.

ಇ) ಗೋಮಾಳವು ಸಾಕಷ್ಟು ಇಲ್ಲದಿರುವಲ್ಲಿ, ಎಲ್ಲೆಲ್ಲಿ ಕಾಡುಗಳಿವೆಯೋ, ಅದನ್ನೇ ಗೋಮಾಳ ವೆಂದು ಉಪಯೋಗಿಸಲಾಗುತ್ತಿದೆ.

ಶ್ರೀ ನಾರಾಯಣರಾವ್ ಮನೋಳಿ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಇಲ್ಲಿ ಉತ್ತರದಲ್ಲಿ ಹೇಳಿದ್ದಾರೆ, ರೆವಿನ್ಯೂ ಕಾನೂನು ಪ್ರಕಾರ ಪ್ರತಿ ಊರಿಗೆ ೩೦ ಎಕರೆ ಭೂಮಿ ಗೋಮಾಳ ಎಂದು ಕಾಯ್ದಿರಿಸಲಾಗಿದೆ ಎಂದು ಆದರೆ ಇದು ನಿಜವೇ ಎಂದು ಸರ್ಕಾರದವರು ಸರ್ವೆ ಮಾಡಿಸಬೇಕು ಏಕೆಂದರೆ ಸಾಕಷ್ಟು ದಿವಸ ಆದರೂ ಇನ್ನೂ ಸರ್ವೆ ಆಗಿಲ್ಲ. ಎಲ್ಲಾ ಕಡೆ ರೆವಿನ್ಯೂ ಲ್ಯಾಂಡ್‌ಗಳಿದ್ದು ಸರ್ವೆ ಮಾಡಿದರೆ ಅನೇಕ ಕಡೆ ಮೂವತ್ತು ಎಕರೆ ಜಮೀನು ಇಲ್ಲವೆಂದು ಸರ್ಕಾರದ ಗಮನಕ್ಕೆ ಬರುತ್ತದೆ. ಎಲ್ಲಿ ಗೋಮಾಳ ಇಲ್ಲ ಅಂತಹ ಜಾಗದಲ್ಲಿ ಫಾರೆಸ್ಟ್ ಲ್ಯಾಂಡ್ ಬೆಳೆಸಿಕೊಳ್ಳಬಹುದೆಂದು ಇಲ್ಲಿ ಹೇಳಿದ್ದಾರೆ. ಆದರೆ ಅಲ್ಲಿ ಏನು ಇದೆ. ಸೆಂಟ್ರಲ್ ರಿಸರ್ವ್ ಫಾರೆಸ್ಟ್ ಮತ್ತು ಸ್ಟೇಟ್ ರಿಸರ್ವ ಫಾರೆಸ್ಟ್ ಎಂದು ಎರಡು ಭಾಗ ಮಾಡಿದ್ದಾರೆ. ಅಂತಹ ಭೂಮಿಯಲ್ಲಿ ಈ ಜಾನುವಾರುಗಳು ಹೋದರೆ. ಅವರಿಗೆ ದಂಡ ಹಾಕುವಂತಹ ಅನೇಕ ಸನ್ನಿವೇಶಗಳನ್ನು ನಾವು ನೋಡಿದ್ದೇವೆ. ಆದರ ಸಲುವಾಗಿ ಕಟ್ಟುನಿಟ್ಟಾಗಿ ಯಾವ ಕ್ರಮ ಸರ್ಕಾರ ಹಾಕಿಕೊಳ್ಳುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಜಾನುವಾರು ಮೇಯಿಸಲು ಹೋದಾಗ ದಂಡ ಹಾಕಿದ್ದು ನಮ್ಮ ನಜರಿಗೆ ಬಂದಿಲ್ಲ. ಆದರೆ ರಿಸರ್ವ್ ಫಾರೆಸ್ಟ್ ಏನು ಇರುತ್ತದೆ. ಅಲ್ಲಿ ಹೋದರೆ ಕಟ್ಟಿಗೆಗಳನ್ನು ನಾಶ ಮಾಡುತ್ತಾರೆ, ಫಾರೆಸ್ಟ್ ನಾಶ ಮಾಡುತ್ತಾರೆ ಎಂದು ಅವರ ಮೇಲೆ ದಂಡ ಹಾಕುತ್ತಾರೆ, ಆದರೆ ಉಳಿದಕಡೆ ಬರಲು ಪ್ರದೇಶದಲ್ಲಿ ಎಲ್ಲಿ ದನಗಳನ್ನು ಸಹ ಮೇಯಿಸಲು ಬರುತ್ತದೆ, ಅಲ್ಲಿ ದಂಡ ಹಾಕಿದ್ದು ನನ್ನ ಗಮನಕ್ಕೆ ಬಂದಿಲ್ಲ ಬಂದರೆ ನಾನು ಫಾರೆಸ್ಟ್ ಮಿನಿಸ್ಟರ್ ಕೂಡ ಮಾತನಾಡಿ ಆ ಬಗ್ಗೆ ವಿಚಾರ ಮಾಡುತ್ತೇನೆ. ಇನ್ನು ತಾವು ಮತ್ತೊಂದು ವಿಚಾರ ಹೇಳಿದಿರಿ. ಕರ್ನಾಟಕ ಭೂ ಕಂದಾಯ ೬೮,೭೭ರ ನಿಯಮಗಳ ಪ್ರಕಾರ ಪ್ರತಿ ಹಳ್ಳಿಗಳಲ್ಲಿ ಒಂದು ನೂರು ರಾಸುಗಳಿಗೆ ೧೨ ಹೆಕ್ಟೇರ್ ಸರ್ಕಾರಿ ಜಮೀನು ಗೋಮಾಳಕ್ಕಾಗಿ ಎಂದು ನಿಗದಿ ಪಡಿಸಬೇಕಾಗಿದೆ. ಈ ಜಮೀನನ್ನು ಅನಧಿಕೃತವಾಗಿ ಒತ್ತುವರಿ ಮಾಡಿರುವುದರಿಂದ ಅನೇಕ ಗ್ರಾಮಗಳಲ್ಲಿ ರಾಸುಗಳು ಮೇಯಲು. ಗೋಮಾಳಗಳು ಸಾಕಷ್ಟು ಇರುವುದಿಲ್ಲ. ಕರ್ನಾಟಕ ಭೂ ಕಂದಾಯ ನಿಯಮಗಳ ೬೬ ನಿಯಮ ೯೭(೨) ರಂತೆ ಗೋಮಾಳ ಸಾಕಷ್ಟು ಇಲ್ಲದೆ ಇರುವಂತಹ ಗ್ರಾಮಗಳಲ್ಲಿ ಆ ಗ್ರಾಮದ ಅರಣ್ಯವನ್ನೇ ಗೋಮಾಳವನ್ನಾಗಿ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಫಾರೆಸ್ಟ್ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತೇನೆ.

ತುಂಡು ಭೂಮಿ ಕಾಯಿದೆ

೫೦೧ (೧೫೯೯) ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) ಶ್ರೀ ಯು. ಕೆ. ಶಾಮಣ್ಣ (ಶೃಂಗೇರಿ) ಶ್ರೀ ಎನ್ ಬಿ. ನಂಜಪ್ಪ (ಶ್ರವಣಬೆಳಗೊಳ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ರಾಜ್ಯದಲ್ಲಿ ತುಂಡು ಭೂಮಿ ಕಾಯಿದೆ ಎಂದಿನಿಂದ ಜಾರಿಗೆ ಕೊಡಲಾಯಿತು?

ಆ) ಈ ಕಾಯಿದೆಯ ಆನುಷ್ಠಾನದಿಂದ ೨ ಎಕರೆ ಜಮೀನು ಹೊಂದಿರುವ ಸಣ್ಣ ಹಾಗೂ ಬಡ ಕುಟುಂಬದ ರೈತರಿಗೆ ಖಾತೆಯ ವರ್ಗಾವಣೆಮಾಡಿಸುವಲ್ಲಿ ಅನಾನುಕೂಲವಾಗುತ್ತಿರುವುದು ನಿಜವೆ?

ಇ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ಹಾಗೂ ಈ ಕಾಯಿದೆಗೆ ತಿದ್ದುಪಡಿ ತರಲಾಗುವುದೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ರಾಜ್ಯದಲ್ಲಿ ತುಂಡು ಭೂಮಿ ಕಾಯಿದೆಯನ್ನು ದಿನಾಂಕ: ೧-೬-೧೯೬೬ ರಿಂದ ಜಾರಿಗೆ ಕೊಡಲಾಯಿತು.

ಆ) ನಿಜ.

ಇ) "ಸ್ಟ್ಯಾಂಡರ್ಡ್ ಏರಿಯ" ಪುನರ್ ನಿಗದಿಪಡಿಸಿ ಕಾಯಿದೆಗೆ ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಲ್ ಆರ್. ಶಿವರಾಮೇಗೌಡ.—ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ ರಾಜ್ಯದಲ್ಲಿ ತುಂಡು ಭೂಮಿ ಕಾಯಿದೆಯನ್ನು ದಿನಾಂಕ ೧-೬-೧೯೬೬ ರಿಂದ ಜಾರಿಗೆ ಕೊಡಲಾಯಿತು ಎಂದು ಉತ್ತರ ಹೇಳಿದ್ದಾರೆ. ಎರಡನೆಯ ಪ್ರಶ್ನೆಯಲ್ಲಿ ಈ ಕಾಯಿದೆಯ ಆನುಷ್ಠಾನದಿಂದ ೨ ಎಕರೆ ಜಮೀನು ಹೊಂದಿರುವ ಸಣ್ಣ ಹಾಗೂ ಬಡ ಕುಟುಂಬದ ರೈತರಿಗೆ ಖಾತೆಯ ಪಾರ್ಗಾಪಣೆ ಮಾಡಿಸುವಲ್ಲಿ ಅನಾನುಕೂಲವಾಗುತ್ತಿರುವುದು ನಿಜವೆ ಎಂದು ಕೇಳಿದ್ದಕ್ಕೆ "ನಿಜ" ಎಂದು ಉತ್ತರ ಕೊಟ್ಟಿದ್ದಾರೆ. ಮತ್ತು ಮೂರನೆಯ ಪ್ರಶ್ನೆಗೆ "ಸ್ಟ್ಯಾಂಡರ್ಡ್ ಏರಿಯಾ" ಪುನರ್ ನಿಗದಿಪಡಿಸಿ ಕಾಯಿದೆಗೆ ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಸ್ಟ್ಯಾಂಡರ್ಡ್ ಏರಿಯ ಅಂದರೆ ಏನು ? ಪುನರ್ನಿಗದಿಪಡಿಸಿ ಯಾವಾಗ ಇದಕ್ಕೆ ತಿದ್ದುಪಡಿ ಮಾಡುತ್ತೀರಿ. ಈ ತುಂಡುಭೂಮಿ ಕಾಯಿದೆಯನ್ನಯ ಸಣ್ಣ ರೈತರಿಗೆ ಬಹಳಷ್ಟು ಅನಾ ಯವಾಗುತ್ತಿದೆ ಹಾಗೂ ತೊಂದರೆಯಾಗುತ್ತಿದೆ. ಅದಕ್ಕೋಸ್ಕರ ಇದಕ್ಕೆ ಯಾವಾಗ ತಿದ್ದುಪಡಿ ಮಾಡುತ್ತೀರಿ ಎನ್ನುವುದನ್ನು ಕೇಳುತ್ತೇನೆ.

ಶ್ರೀ ಕೆ ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೆ ಹೇಳಿದ್ದೇನೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ತುಂಡುಭೂಮಿ ಕಾನೂನಿನನ್ವಯ ರೈತರಿಗೆ ಅದರಲ್ಲೂ ಹೆಚ್ಚಾಗಿ ಬಡ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಕಾನೂನನ್ನು ತೆಗೆದುಹಾಕಬೇಕು ಎನ್ನುವಂಥಾದ್ದು ಸರ್ಕಾರದ ಗಮನದಲ್ಲಿದ್ದರೂ ಸಹ ಕೇಂದ್ರಸರ್ಕಾರದವರು ಒಂದು ಭೂಜೋಡಣೆ ಸಲುವಾಗಿ ಈ ಕಾನೂನು ಇರಬೇಕು ಎಂದು ಅಭಿಪ್ರಾಯವು ಪಟ್ಟಿರುವುದರಿಂದ, ಈ ಕಾನೂನಿನಲ್ಲಿ ತಿದ್ದುಪಡಿಮಾಡಿ ಸೂಕ್ತ ಬದಲಾವಣೆಯಿಂದ ಯಾರಿಗೂ ತೊಂದರೆಯಾಗದಂತೆ ಅಥವಾ ಈ ತುಂಡು ಭೂಮಿ ಏನಿದೆ ಆ ತುಂಡನ್ನೆ ಪೂರಾಟ ಮಾಡಲಿಕ್ಕೆ ಅವಕಾಶ ಕೊಡುವಂಥ ಒಂದು ಬಿಲ್ಲನ್ನು ತರಬೇಕು ಎಂಬಾ ತೀಪ್ರ ಆಲೊ ಚನೆ ಇದೆ. ಅದನ್ನು ಆ ಬಿಲ್ಲನ್ನು ಈ ಸದನದ ಎದುರಿಗೆ ತರುತ್ತೇನೆ.

ಶ್ರೀ ಯು. ಕೆ ಶಾಮಣ್ಣ.—ಮಾನ್ಯ ಅಧ್ಯಕ್ಷರೆ. ನಾನು ಈ ತುಂಡುಭೂಮಿ ಕಾಯಿದೆ ಬಗ್ಗೆ ಕೇಳಿದ ಪ್ರಶ್ನೆಗೆ, ಸ್ಟ್ಯಾಂಡರ್ಡ್ ಏರಿಯ ಪುನರ್‌ನಿಗದಿಪಡಿಸುತ್ತೇವೆಂದು ಹೇಳಿದ್ದಾರೆ ಈ ಕಾಯಿದೆ ಸೌತ್‌ಕೆನರಾದಲ್ಲಿ ಹೆಚ್ಚಿಗೆ ಅಪ್ಲೈ ಆಗುತ್ತಾ ಇಲ್ಲ. ಅದೇ ನನ್ನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚಾಗಿ ಜಮೀನು ಕಳೆದುಕೊಂಡಿರುವಂಥ ಅಂದರೆ ಭೂಸುಧಾರಣಾ ಕಾನೂನಿನಿಂದ ಹೆಚ್ಚಿನ ರೀತಿಯಲ್ಲಿ ರೈತಾಪಿ ಜನರಿಗೆ ಅನುಕೂಲವಾಗಿರುವಂಥ ಸಂದರ್ಭದಲ್ಲಿ ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗಿದೆ. ಕೆಲವು ಕಡೆಗಳಲ್ಲಿ ಹೆಕ್ಟೇರ್ಸ್ ಎಂದು ಕರೆಯುತ್ತಾರೆ, ಅಲ್ಲಿ ಜಾರಿ ಮಾಡಿದ್ದಾರೆ. ಎಕರೆ. ಗುಂಟೆ ಎಂದು ಹೇಳುವಂಥ ಪ್ರದೇಶಗಳಲ್ಲಿ ಈ ಕಾಯಿದೆ ಬಹಳ ಬಿಗುವಾಸವಾಗಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ರಾಜ್ಯದಲ್ಲಿ ಒಂದು ಕಡೆ ಜಾರಿಗೆ ಬಂದು ಮತ್ತೊಂದು ಕಡೆ ಇದು ಅಪ್ಲೈ ಆಗುವುದಿಲ್ಲ ಎನ್ನುವುದಕ್ಕೆ ಕಾರಣವೇನು ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ. ಹೆಚ್ ಪಾಟೀಲ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕಾನೂನನ್ನು ಜಾರಿಗೊಳಿಸಿಲ್ಲ. ಅಲ್ಲಿ ಬೇರೆ ರೀತಿಯ ಕಾನೂನು ಇರುವುದರಿಂದ ಅದು ಮದ್ರಾಸ್ ಪ್ರದೇಶದಿಂದ ಬಂದಂಥನಾದಾರುವುದರಿಂದ, ಅಲ್ಲಿ ಈ ತುಂಡು ಭೂಮಿ ಕಾನೂನು ಲಾಗು ಆಗಿಲ್ಲ. ಆ ದೃಷ್ಟಿಯಿಂದ ಅಲ್ಲಿ ಇದು ಹತ್ತುವುದಿಲ್ಲ. ಉಳಿದ ಕಡೆ ಹತ್ತುತ್ತದೆ. ಬೇರೆ ಕಡೆಗೆ ತೊಂದರೆಯಾಗಿದೆ ಎನ್ನುವುದು ಸರ್ಕಾರ ಗಮನಿಸಿದೆ ಎಂದು ಹೇಳಿದ್ದೇನೆ ಆ ಕಾನೂನನ್ನು ಪೂರ್ಣವಾಗಿ ತೆಗೆದುಹಾಕಬೇಕೇ ಅಥವಾ ಅದರಲ್ಲಿ ಮಾರ್ಪಾಡು ಮಾಡಿ ಜನರಿಗೆ ತೊಂದರೆಯಾಗದಂತೆ ಮಾಡಬೇಕೇ ಎನ್ನುವುದನ್ನು ನಾನು ವಿಚಾರ ಮಾಡಿ ಮುಂದಿನ ಸದನದಲ್ಲಿ ಆ ವಿಷಯವನ್ನು ಸಭೆಯ ಮುಂದೆ ಇಡುತ್ತೇನೆ.

ಡಾ॥ ಎನ್. ಬಿ. ನಂಜಪ್ಪ. ದಕ್ಷಿಣಕನ್ನಡ ಜಿಲ್ಲೆ ಕರ್ನಾಟಕಕ್ಕೆ ಸೇರಿದಂಥ ಭಾಗ, ಚಿಕ್ಕಮಗಳೂರು ಜಿಲ್ಲೆ ಕರ್ನಾಟಕಕ್ಕೆ ಸೇರಿದಂಥ ಭಾಗ. ಆ ಕಡೆಗೆ ಮತ್ತು ಈ ಕಡೆಗೆ ವ್ಯತ್ಯಾಸ ಮಾಡುವುದಕ್ಕೆ ಕಾನೂನು

ಚೌಕಟ್ಟಿನಲ್ಲಿ ಏನು ತೊಂದರೆಯಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಸೌಲಭ್ಯವನ್ನು ಕೊಟ್ಟಿದ್ದೀರಿ ಅದೇ ಸೌಲಭ್ಯವನ್ನು ನಮಗೂ ಕೊಡಿ ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತಾ ಇದ್ದೇನೆ. ಏಕೆಂದರೆ. ಅನೇಕ ಜನರಿಗೆ ಇದರಿಂದ ತೊಂದರೆಯಿದೆ.

ಶ್ರೀ ಕೆ. ಹೆಚ್. ಪಾಟೀಲ್.—೧೯೫೫ನೇ ಇಸವಿಯಲ್ಲಿ ಅನೇಕ ಭಾಗಗಳಿಂದ ಒಡಗೂಡಿದಂಥ ಕರ್ನಾಟಕ ರಾಜ್ಯವಾಗಿದ್ದರೂ ಕೂಡ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಕಾನೂನುಗಳು ಇನ್ನೂ ಆಗೇ ಇದೆ. ಅವೆಲ್ಲವುಗಳನ್ನು ಕ್ರೋಢೀಕರಿಸಿ ಒಂದೇ ಕಾನೂನು ತರಲಿಕ್ಕೆ ಇನ್ನೂ ಪ್ರಯತ್ನ ನಡೆದಿಲ್ಲ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಸಭಾಧ್ಯಕ್ಷರಿಗೆಯವರೆ, ಮಾನ್ಯ ಕಂದಾಯ ಮಂತ್ರಿಗಳಲ್ಲಿ ನನ್ನ ವಿನಂತಿ ಇಷ್ಟೆ, ಕೆ ಂದ್ರ ಸರ್ಕಾರದವರು ಈ ಕಾನೂನು ಇರಲಿ ಎಂದು ಹೇಳುತ್ತಾ ಇರಬಹುದು. ಅವರು ಇಂತಹ ಹಲವಾರು ಕಾನೂನುಗಳು ಇರಲ್ಲಿ ಎಂದು ಹೇಳುತ್ತಾರೆ. ಈ ಕಾನೂನು ಸಂವಿಧಾನ ಬದ್ಧವಾಗಿದೆಯೋ ಅಥವಾ ಸಂವಿಧಾನ ವಿರುದ್ಧವಾಗಿದೆಯೋ ಎಂದು ಮಾನ್ಯ ಕಂದಾಯ ಮಂತ್ರಿಗಳು ಸ್ವಲ್ಪ ತನಿಖೆ ಮಾಡಬೇಕು. ಮೊದಲನೆಯದು ಏನೆಂದರೆ, ಇದರ ಉದ್ದೇಶ ಕನ್ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಎಂದು ಹೇಳುತ್ತಾರೆ. ಆ ಕಾರಣ, ನಮ್ಮ ಹಳ್ಳಿಗಳಲ್ಲಿ ಕುಟುಂಬಗಳು ಭಾಗವಾಗಿ, ೧೦ ಗುಂಟೆ ೨೦ ಗುಂಟೆ ಭಾಗವಾಗಿ ಬಂದು ಅವರು ಅದರಿಂದ ಏನೂ ಮಾಡುವುದಕ್ಕೆ ಆಗುತ್ತಾ ಇಲ್ಲ, ಅವರಿಗೆ ಖಾತೆ ಮಾಡುವುದಿಲ್ಲ. ಅದರ ಮೇಲೆ ಏನೂ ಸೌಲಭ್ಯ ಸಿಗುವುದಿಲ್ಲ. ಅವನು ಈ ಕೃಷಿ ಉದ್ಯೋಗ ನನಗೆ ಬೇಡ, ಈ ೧೦ ಗುಂಟೆ ಭೂಮಿ ಬೇಡ, ಇದನ್ನು ಮಾರಿ ಒಂದು ಸಣ್ಣ ಬೀಡಿ ಅಂಗಡಿ ಇಟ್ಟುಕೊಳ್ಳುತ್ತೇನೆ ಅಂದರೆ ಅವನ ಮೂಲಭೂತ ಹಕ್ಕಿಗೂ ಈ ಕಾನೂನು ಧಕ್ಕೆ ತರುತ್ತಾ ಇದೆ. This law is directly violating my right to

೯–೩೦ ಎ. ಎಂ.

freedom of trade and occupation. It is totally un-constitutional. You should tell the Central Government that it should wake up and abolish this Fragmentation Act ಈ ತುಂಡು ಭೂಮಿ ಕಾಯಿದೆಯಿಂದ ಮೂಲಭೂತ ಹಕ್ಕಿಗೆ ಧಕ್ಕೆ ತರುತ್ತದೆ. ಈ ಕಾಯಿದೆ ಮೇಲೆ ತಾವು ದಾಖಲೆ ಮಾಡುತ್ತಿಲ್ಲ. You are trying to consolidate the holdings. But in actuality, it is fragmented. ಹಳ್ಳಿಗಳಲ್ಲಿ ಈಗಾಗಲೇ ಭಾಗ ಆಗಿ ಹೋಗಿದೆ. ತಹಶೀಲ್ದಾರ್ ಕಛೇರಿಯಲ್ಲಿ ಕನ್ಸಾಲಿಡೇಷನ್ ಆಗಿ ಟೇಬಲ್ ಮೇಲೆ ಇದೆ. ಈ ಅವಿವೇಕತನವನ್ನು ಮುಂದುವರಿಸುತ್ತೀರಾ, ಅಥವಾ ಕೇಂದ್ರಕ್ಕೆ ಬುದ್ಧಿವಾದ ಹೇಳಿ, ಸಂವಿಧಾನಕ್ಕೆ ವಿರುದ್ಧವಾದ ಈ ಕಾನೂನನ್ನು ರದ್ದು ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಕನ್ಸಾಲಿಡೇಷನ್ ಆಫ್ ಲ್ಯಾಂಡ್ ಸೀಲಿಂಗ್‌ಗೆ ಅನುಕೂಲವಾಗುತ್ತದೆ ಎಂದು ಅವರು ನಮಗೆ ಈ ಕಾನೂನನ್ನು ಆಡ್ವೈಸ್ ಮಾಡಿದ್ದಾರೆ ಆದರೆ ಕನ್ಸಾಲಿಡೇಷನ್ ಮುಗಿದು ಹೋಗಿದೆ. ಆ ದೃಷ್ಟಿಯಿಂದ ಈ ಕಾನೂನು ಇಪ್ಪೊತ್ತು ಇರುವುದು ಸೂಕ್ತವೇ, ಅಥವಾ ಬದಲಾವಣೆ ಮಾಡುವುದು ಸೂಕ್ತವೆ ಎಂಬುದನ್ನು ವಿಚಾರ ಮಾಡುತ್ತೇವೆ. ಇದು ಸಂವಿಧಾನಕ್ಕೆ ವಿರುದ್ಧವಾಗಿದೆಯೆಂದು ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ್ದಾರೆ. ಅನೇಕರು ಹೈಕೋರ್ಟಿಗೆ ಹೋದಮೇಲೆ, ಹೈಕೋರ್ಟಿನವರು ಅಪೀಲ್ಡ್ ಮಾಡಿರುವುದರಿಂದ, ಘಟನೆಗೆ ಯಾವ ರೀತಿಯಲ್ಲೂ ವಿರುದ್ಧವಾಗಿಲ್ಲ. ಆದರೂ ಸಹ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾ, ರೈತಾಪಿ ಜನರಿಗೆ, ಆದರಲ್ಲೂ ಬಡವರಿಗೆ. ಆದರಲ್ಲೂ ಅತ್ಯಂತ ಬಡವರಿಗೆ ಇದರಿಂದ ತೊಂದರೆಯಾಗುತ್ತಿದೆ. ಎರಡು ಎಕರೆ ಜಮೀನು ಇದ್ದವರು ಒಂದು ಎಕರೆ ಮಾರಾಟ ಮಾಡಿ ಜೀವನ ಮಾಡತಕ್ಕವರಿಗೆ ಇದರಿಂದ ತುಂಬಾ ತೊಂದರೆಯಾಗಿದೆ. ನಾವು ಕಂಡಂತೆ ಎಷ್ಟೋ ಜನ ಹಿಂದಿನಿಂದ ೂ ಒಂದು ಎಕರೆ ಜಮೀನಿನಲ್ಲಿ ಗುಲಾಬಿ ಹೂವು ಬೆಳೆದು ಜೀವನ ನಡೆಸಬಹುದು. ಎರಡು ಎಕರೆ ಇದ್ದರೆ ಸರಿ ಎಂದು ಒತ್ತಾಯ ಮಾಡುವುದರಿಂದ ಮಾರಾಟ ಮಾಡುವವರು ತನ್ನ ಜಮೀನನ್ನು ಮಗ್ಗಲು ಹೊಲದವರಿಗೇ ಕೊಡ ಬೇಕಾಗುತ್ತದೆ. ಇದರಿಂದ ಹೆಚ್ಚು ಬೆಲೆ ಬರುವುದಿಲ್ಲ. ಇಂತಹ ಅನೇಕ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿವೆ. ನಿಮ್ಮ ಸಹಕಾರದಿಂದ ಮುಂದಿನ ಅಧಿವೇಶನದಲ್ಲಿ ಈ ಕಾನೂನಿಗೆ ಯೋಗ್ಯ ಬದಲಾವಣೆ ಮಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ.— ಒಳಹಕ್ಕುಗಳಿಂದಲೂ ಚರ್ಚೆ ಸದನದಲ್ಲಿ ನಡೆಯುತ್ತಲೇ ಇದೆ. ಮಾನ್ಯ ಮಂತ್ರಿಗಳು ಮುಂದಿನ ಅಧಿವೇಶನದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಅಷ್ಟು ಸಾಕು.

ಉಪಾಧ್ಯಕ್ಷರು.—ಮಾನ್ಯ ರಾಣಿಯವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಸಮಯ ಕೇಳಿದ್ದಾರೆ.

ಶ್ರೀ ಪ್ರಭಾಕರ ಎಸ್. ರಾಣಿ.—ಈ ಅಧಿವೇಶನ ಮುಗಿಯುವುದರಲ್ಲಿಯೆ ಉತ್ತರ ಬರುತ್ತದೆಯೇ ?

ಉಪಾಧ್ಯಕ್ಷರು.—ಬರುತ್ತದೆ.

ತಹಸೀಲ್ದಾರರುಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸುವುದು

೫೦೪ (೧೭೮೫) ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಸರ್ಕಾರದ ಸಚಿವ ಸಂಪುಟವು ದಿನಾಂಕ ೨೩-೧೦-೧೯೫೭ರಂದು ನಡೆಸಿದ ಸಚಿವ ಸಂಪುಟ ಸಭೆಯಲ್ಲಿ ನಡವಳಿಕೆ ಸಂಖ್ಯೆ ಸಿ ೨೩೩-೫೭-೫೮ರಲ್ಲಿ ತಹಶೀಲ್ದಾರರನ್ನು ತಾಲ್ಲೂಕಿನ ಮುಖ್ಯಸ್ಥ ಎಂದು ಘೋಷಿಸಿರುವ ಬಗ್ಗೆ ಸರ್ಕಾರಕ್ಕೆ ತಿಳುವಳಿಕೆ ಇದೆಯೇ ?

ಆ) ಒಂದು ದಶಕದ ಹಿಂದೆ ತಾಲ್ಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದ ಅನೇಕ ಹುದ್ದೆಗಳು ತಹಶೀಲ್ದಾರರ ಹುದ್ದೆಗೆ ಸರಿಸಮಾನವಾದ್ದು ನಂತರ ಆ ಹುದ್ದೆಯನ್ನು ವೃಂದ 'ಎ' ಕಿರಿಯ ಶ್ರೇಣಿಯ ಹುದ್ದೆಗೆ ಪದೋನ್ನತಿಗೊಳಿಸಿರುವುದು ನಿಜವೇ ?

ಇ) ತಹಶೀಲ್ದಾರರು ಈಗಲೂ ತಾಲ್ಲೂಕು ಮಟ್ಟದ ಅನೇಕ ಸಮಿತಿಗಳಿಗೆ ಅಧ್ಯಕ್ಷರಾಗಿ ಅಥವಾ ಸಮನ್ವಯಾಧಿಕಾರಿಯಾಗಿ ಈಗಲೂ ಕೆಲಸ ನಿರ್ವಹಿಸುತ್ತಿರುವುದು ನಿಜವೇ ?

ಈ) ತಾಲ್ಲೂಕು ಮಟ್ಟದ ಅನೇಕ ಹುದ್ದೆಗಳು ವೃಂದ 'ಎ' ಶ್ರೇಣಿಗೆ ಪದೋನ್ನತಿ ಹೊಂದಿದ್ದು ತಹಶೀಲ್ದಾರರ ಹುದ್ದೆಯು ವೃಂದ 'ಬಿ' ಶ್ರೇಣಿಯಲ್ಲಿಯೂ ಮುಂದುವರಿದಿದ್ದು ಇದರಿಂದ ತಾಲ್ಲೂಕಿನ ಮುಖ್ಯಸ್ಥರಾದ ತಹಶೀಲ್ದಾರರ ಕಾರ್ಯ ಸಾಮರ್ಥ್ಯದ ಮೇಲೆ ಪರಿಣಾಮ ಬೀರುವುದಿಲ್ಲವೇ. ?

ಉ) ಕರ್ನಾಟಕ ವಿಧಾನಮಂಡಲದ ಅಂದಾಜು ಸಮಿತಿಯು ದಿ: ೨೬-೩-೧೯೮೭ರಂದು ನೀಡಿದ ವರದಿಯಲ್ಲಿ ತಹಶೀಲ್ದಾರರ ಹುದ್ದೆಯನ್ನು ವೃಂದ 'ಎ' ಕಿರಿಯ ಶ್ರೇಣಿಯ ಹುದ್ದೆಗೆ ಪದೋನ್ನತಿಗೊಳಿಸುವ ಬಗ್ಗೆ ಶಿಫಾರಸ್ಸು ಮಾಡಿರುವ ವಿಚಾರ ನಿಜವೇ?

ಊ) ಹಾಗಿದ್ದಲ್ಲಿ ತಹಶೀಲ್ದಾರರ ಹುದ್ದೆಯನ್ನು ವೃದ್ದ 'ಎ' ಕಿರಿಯ ಶ್ರೇಣಿಗೆ ಪದೋನ್ನತಿಗೊಳಿಸಲು ಸರ್ಕಾರಕ್ಕೆ ಯಾವ ಅಡಚಣೆ ಇದೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಹೌದು.

ಆ) ಹೌದು.

ಇ) ಹೌದು.

ಈ) ಇಲ್ಲ.

ಉ) ಹೌದು.

ಊ) ತಹಶೀಲ್ದಾರರ ಹುದ್ದೆಯನ್ನು ವೃಂದ 'ಎ' ಕಿರಿಯ ಶ್ರೇಣಿಗೆ ಪದೋನ್ನತಿಗೊಳಿಸುವ ವಿಚಾರ ಇಲಾಖೆಯ ಇತರ ಹುದ್ದೆಗಳ ಮೇಲೆ ಹಾಗೂ ಇತರ ಇಲಾಖೆಗಳ ಮೇಲೆ ಪರಿಣಾಮ ಬೀರುವುದರಿಂದ ಮತ್ತು ಹೆಚ್ಚಿನ ಹಣಕಾಸಿನ ಹೊರೆಯು ಬೀಳುವುದರಿಂದ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಪ್ರಶ್ನೆ ಈ ಸದನದಲ್ಲಿ ೨ನೇ ಬಾರಿಗೆ ಬರುತ್ತಿದೆ. ಮಂತ್ರಿಗಳ ಮನಸ್ಸು ಏನೂ ಎಂದು ನನಗೆ ಗೊತ್ತಾಗಿದೆ. ಆದ್ದರಿಂದ ಉಪ ಪ್ರಶ್ನೆ ಕೇಳಬೇಕೋ ಬೇಡವೋ